Mr. DEPUTY SPEAKER.—The member will please put a specific question.

Sri V. N. PATIL.—In that village a particular Minister's name was uttered and two people were murdered by burning them, actually houses were set on fire.

Sri B. D. JATTI.—Sir, it is not fair on the part of the hon'ble member to mention the name of the Minister and it is not correct also for the hon'ble member to involve the name of the Government. If he is in personal possession of any information, let him pass it on to the Home Department and it will be looked into and proper investigation will be made.

I may also bring it to the notice of the House that some of the hon'ble members who are practising pleaders there try to approach the Superintendent of Police. It is not correct.

(*Interruption*)

Mr. DEPUTY SPEAKER.—Order, order.

Establishment of a Dairy Farm

424. Sri M. MALLAPPA (Birur).—

Will the Minister for Labour, Animal Husbandry, Fisheries and Sericulture be pleased to state :—

(*a*) is it a fact that the public of Kadur and Birur are urging for the establishment of Dairy Farm in Birur Farm or Yemmedoddi Gosadan in Kadur Taluk for supply of Milk to both the towns of Kadur and Birur;

(*b*) is it not a fact that vast area of grazing field is available in Yemmedoddi and Birur to rear milch cows and buffaloes ;

(*c*) whether they propose to establish the Dairy Farm in the economic farm, Birur or at the Dairy Farm, Yemmedoddi ?

A.—Sri D. DEVARAJ URS (Minister for Labour, Animal Husbandry, Fisheries and Sericulture).—

(*a*) Representations have been received by Government.

(*b*) Grazing fields are available.

(*c*) There is no such proposal for the present. But Government are examining the possibility of having a Dairy Farm.

ಶ್ರೀ ಎಂ. ಮಲ್ಲಪ್ಪ.—ಸರಕಾರದವರಿಗೆ ಮನವಿಗಳು ಬಂದಿವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ತಮಗೆ ಗೊತ್ತಿರುವ ಹಾಗೆ ಈ ಪ್ರದೇಶದಲ್ಲಿ ಒಳ್ಳೆಯ ಗಾಳಿ ಇದೆ ಮತ್ತು ನಮ್ಮಲ್ಲಿ ಯಾಗಿ ನೀರೂ ಇದೆ. ಮತ್ತು ದನಗಳಿಗೆ ಒಳ್ಳೆಯ ಮೇವೂ ಇದೆ. ಇಲ್ಲಿ ಸರಕಾರವವು ಡೈರಿ ಫಾರಂನ್ನು ಸ್ಥಾಪಿಸಿದರೆ ಅನುಕೂಲವಾಗುತ್ತದೆ ಎಂದು ಮನವಿಗಳನ್ನು ಕಳುಹಿಸಿರುವುದರ ಬಗ್ಗೆ ಸರಕಾರದವರು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—ರೆಪ್ರಸೆಂಟೇಷನ್‌ಗಳು ಸರಕಾರಕ್ಕೆ ಬಂದಿವೆ. ಕೆಲವು ಪ್ರಮುಖರುಗಳು ಬೀರೂರಿನಲ್ಲಿ ಒಂದು ಡೈರಿ ಫಾರಂನ್ನು ಖಾಸಗಿಯಾಗಿ ಮಾಡಲು ಅರ್ಜಿ ಕೊಟ್ಟಿದ್ದಾರೆ. ಆದರೆ ಇಲ್ಲಿರುವ ಕ್ಯಾಟಲ್ ಬ್ರೀಡಿಂಗು ಸ್ಟೇಷನ್‌ನವರು ಸರ್ಕಾರದವರೇ ಒಂದು ಫಾರಂ ಮಾಡಬಹುದು ಎಂದು ಸಲಹೆ ಕೊಟ್ಟಿದ್ದಾರೆ. ಇದು ಸರಕಾರದ ಪರಿಶೀಲನೆಯಲ್ಲಿದೆ. ಖಾಸಗಿಯಾಗಿ ಕೆಲವರು ಇಲ್ಲಿ ಡೈರಿಗಳನ್ನು ಮಾಡಬೇಕು ಎಂದು ಕೇಳಿದರೆ ಅವರಿಗೆ ಜಮೀನನ್ನು ಬೇಕಾದರೆ ರಿಲೀಸು ಮಾಡಿಸಿಕೊಡಬಹುದು. ಖಾಸಗಿಯಾಗಿಯೇ ಕೆಲವರು ಮಾಡಬೇಕೆಂದು ಅರ್ಜಿ ಹಾಕಿರುವವರಿಗೆ ಭೂಮಿ ಕೊಡಬಹುದು ಎಂದು ಅವರಿಗೆ ಶಿಫಾರಸು ಮಾಡಿ ಅದನ್ನು ರೆವೆನ್ಯೂ ಇಲಾಖೆಯವರಿಗೆ ಕಳುಹಿಸಿಕೊಡಲಾಗಿದೆ.

ಶ್ರೀ ಎಂ. ಮಲ್ಲಪ್ಪ.—ಇಲ್ಲಿ ಡೈರಿ ಫಾರಂ ಮಾಡಬೇಕಾದರೆ ಸರಕಾರದ ಮತಿಯಿಂದಲೇ ಮಾಡಬೇಕೆಂದು ಇದ್ದೀರೋ ಇಲ್ಲವೇ ಕೋ-ಆಪರೇಟೀವ್ ಸೊಸೈಟಿಗಳಿಗೆ ಕೊಟ್ಟು ಮಾಡಿಸುತ್ತೀರೋ, ಇಲ್ಲವೆ ಖಾಸಗಿಯಾಗಿ ಡೈರಿ ಮಾಡುವವರಿಗೆ ಸರಕಾರದವರು ಸಹಾಯ ಮಾಡಲಿಕ್ಕೆ ಸಾಧ್ಯವೇ ?

ಶ್ರೀ ಡಿ. ದೇವರಾಜ ಅರಸ್.—ಡೈರಿ ಫಾರಂನ್ನು ಮಾಡತಕ್ಕದ್ದು ಸರಕಾರದ ಮುಖಾಂತರ ಮಾಡಬಹುದು ಇಲ್ಲವೇ ಕೋಆಪರೇಟೀವ್ ಸೊಸೈಟಿಗಳ ಮೂಲಕ ಮಾಡಬೇಕು. ಇತ್ತೀಚೆಗೆ ರಿನರ್ಫ್ ಬ್ಯಾಂಕಿನವರು ಒಂದು ಆಜ್ಞೆ ಹೊರಡಿಸಿ ಅವರ ಪಾಲಿಸಿ ಬದಲಾವಣೆ ಮಾಡಿದ್ದಾರೆ. ಈ ಬ್ಯಾಂಕಿನವರು ಕೋ ಆಪರೇಟೀವ್ ಸೊಸೈಟಿಗಳಿಗೆ ಹಣವನ್ನು ಸಾಲವಾಗಿ ಕೊಟ್ಟು ಮೂರು ವರ್ಷದ ಕಂತುಗಳಲ್ಲಿ ಮಧ್ಯಮಾವಧಿ ಸಾಲವಾಗಿ ಕೊಡಬೇಕು ಎಂದು ಮಾಡಿದ್ದಾರೆ. ಇದರಂತೆ ಎಲ್ಲ ಕೋ ಆಪರೇಟೀವ್ ಅಪೆಕ್ಸ್ ಬ್ಯಾಂಕುಗಳಿಗೆ ಹಾಗೂ ಡಿಸ್ಟ್ರಿಕ್ಟ್ ಬ್ಯಾಂಕುಗಳಿಗೆ ನೋಟಿನೆಗಳನ್ನು ಕೂಡ ಕೊಟ್ಟಿದ್ದೇವೆ. ಇದೂ ಅಲ್ಲದೆ ಕೋಆಪರೇಟಿವ್ ಆಕ್ಟ್ ಪ್ರಕಾರ ನಾಲ್ಕಾರು ಜನರು ಸೇರಿ ಕೊಂಡು ಒಂದು ಸೊಸೈಟಿ ಮಾಡಿಕೊಂಡು ಡೈರಿ ಮಾಡುತ್ತೇವೆ ಎಂದು ಮುಂದೆ ಬಂದರೆ ಆಗ ಸರಕಾರದವರು ಅದನ್ನು ಮಾಡಲು ಏರ್ಪಾಡು ಮಾಡಬಹುದು. ಇಲ್ಲವೇ ಖಾಸಗಿ ಜನರೇ ಅವರಲ್ಲಿ ಜಮೀನಿದೆ ಅವರೇ ಒಂದು ಡೈರಿಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಬಂದರೆ ಅದಕ್ಕಾಗಿ ಬೇಕಾದರೂ ಏರ್ಪಾಡು ಮಾಡಬಹುದು.

ಶ್ರೀ ಎಂ. ಮಲ್ಲಪ್ಪ.—ಸರಕಾರದವರು ಖಾಸಗಿಯವರಿಗೆ ಕೊಡುವ ಸಹಾಯ ಧನ ಎಷ್ಟು, ಕೋ ಆಪರೇಟಿವ್ ಸೊಸೈಟಿಗೆ ಕೊಡುವ ಸಹಾಯ ಧನ ಎಷ್ಟು ?

ಶ್ರೀ ಡಿ. ದೇವರಾಜ ಅರಸ್.—ಕೋ-ಆಪರೇಟಿವ್ ಸೊಸೈಟಿಗಳಿಗೆ ಕೊಡುವುದು ಸಹಾಯ ಧನ ಅಲ್ಲ. ಅದು ಸಾಲ. ಸಾಲ ತೆಗೆದುಕೊಳ್ಳಲಿಕ್ಕೆ ಅಸ್ತಿಪಾಸ್ತಿ ಆಧಾರದ ಕೊಡಬೇಕಾಗುತ್ತದೆ. ಅದರ ಮೇಲೆ ಸಾಲ ಕೊಡುವುದು ಅವಲಂಬಿಸಿರುತ್ತದೆ. ಒಂದು ಲಕ್ಷ ರೂಪಾಯಿ ಸಾಲ ಬೇಕಾದರೆ ತೆಗೆದುಕೊಳ್ಳಬಹುದು. ಸರಕಾರ ಇದನ್ನು ಮಾಡಬೇಕೆಂದು ಗೊತ್ತು ಮಾಡಿ ಕೊಂಡಿಲ್ಲ. ಸರಕಾರ ಮಾಡುವ ಯೋಜನೆಯಲ್ಲಿ ಒಂದು ಲಕ್ಷ ಎರಡು ಲಕ್ಷ ನಾಲ್ಕು ಲಕ್ಷ ಆಗಬಹುದು. ಅದನ್ನು ಈಗಲೇ ಹೇಳಲು ಬರುವುದಿಲ್ಲ.

ಶ್ರೀ ಜಿ. ರಾಮೇಗೌಡ.—ನಮ್ಮ ಭಾರತ ದೇಶದಲ್ಲಿ ಸರಕಾರದವರು ತಾವೇ ನಡೆಸಿಕೊಂಡು ಹೋಗತಕ್ಕಂಥ ಡೈರಿಗಳು ವಿಫಲವಾಗಿವೆ ಇದರಲ್ಲಿ ನಷ್ಟವಾಗಿದೆ. ಅದುದರಿಂದ ಇನ್ನು ಮುಂದೆ ಈ ಯೋಜನೆ ಸರಕಾರ ತಾವೇ ಮಾಡಕೂಡದು ಎಂದು ತಜ್ಞರು ಹೇಳಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಯಾವ ತಜ್ಞರು ಹಾಗೆ ಹೇಳಿದ್ದಾರೆ ಎನ್ನುವುದಕ್ಕೆ ಅವರ ಹೆಸರು ಹೇಳಿದರೆ ಅವರ ಅಭಿಪ್ರಾಯ ತರಿಸಿ ಓದುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಖಾಸಗಿಯವರು ಕೋ-ಆಪರೇಟಿವ್ ಸೊಸೈಟಿ ಮಾಡಿ ಕೊಂಡು ಡೈರಿ ಪ್ರಾರಂಭ ಮಾಡಿದರೆ ಅದಕ್ಕೆ ಸರಕಾರ ಸಹಾಯ ಮಾಡುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—ಕೋ-ಆಪರೇಟಿವ್ ಸೊಸೈಟಿಗಳಿಗೆ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕ್‌ನಿಂದ ಸಾಲ ಕೊಡುತ್ತಾರೆ, ಅಗ್ರಿಕಲ್ಚರಲ್ ಫೈನಾನ್ಸಿಂಗ್ ಕಾರ್ಪೊರೇಷನ್ ಅವರು ಸಾಲ ಕೊಡುವುದಕ್ಕೆ ಏರ್ಪಾಡು ಮಾಡಬಹುದು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಕಡೂರು ಮತ್ತು ಬೀರೂರ್‌ನಲ್ಲಿ ಡೈರಿ ಫಾರ್ಮ್ ಸ್ಥಾಪನೆ ಮಾಡುವುದನ್ನು ಪರಿಶೀಲಿಸುತ್ತಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ. ಇದನ್ನು ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಮಾಡುತ್ತೀರಾ ? ಅಥವ ಸರಕಾರದ ಮುಖಾಂತರ ಸ್ಥಾಪನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಅದನ್ನು ಕೇಳುವುದಕ್ಕೆ ಬಂದಾಗ್ಯೆ ಯೋಚನೆ ಮಾಡೋಣ. ಇಲ್ಲವೆ ಸರಕಾರ ಯಾವ ರೀತಿ ಮಾಡಬಹುದು ಎನ್ನುವುದನ್ನು ಯೋಚನೆ ಮಾಡೋಣ.

ಶ್ರೀ ಎಚ್. ಸಿದ್ಧವೀರಪ್ಪ.—ಇದುವರೆಗೆ ಡೈರಿ ಫಾರಂ ಸ್ಥಾಪನೆ ಮಾಡಿ ಅದಕ್ಕೆ ದುಡ್ಡು ಕೊಟ್ಟಿರತಕ್ಕಂಥ ಸಂಸ್ಥೆಗಳಲ್ಲಿ ಎಷ್ಟೋ ಸಂಸ್ಥೆಗಳು ಹಾಲನ್ನು ತಯಾರು ಮಾಡದೇನೇ ದುಡ್ಡು ತಿಂದು ಹಾಕಿ ಅಲ್ಲಿಯ ದನಗಳು ಸತ್ತು ಹೋಗಿವೆ ಎಂದು ತಮಗೆ ರಿಪೋರ್ಟು ಬಂದಿದೆಯೇ? ಇದರಲ್ಲಿ ಎಷ್ಟು ಹಣ ಪೋಲು ಆಗಿದೆ?

ಶ್ರೀ ಡಿ. ದೇವರಾಜ ಅರಸ್.—ಬೆಂಗಳೂರು ಡೈರಿ ಸ್ಥಾಪನೆ ಮಾಡುವ ಕಾಲದಲ್ಲಿ ಹಾಲು ಉತ್ಪಾದನೆ ಹೆಚ್ಚಿಸಬೇಕೆಂದು ಕೆಲವು ಲಕ್ಷರೂಪಾಯಿ ಬೆಂಗಳೂರು ಏರಿಯಾದಲ್ಲಿ ದೊಡ್ಡ ಬಳ್ಳಾಪುರ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮತ್ತು ಇನ್ನೂ ಕೆಲವು ಕಡೆ ಸಾಲ ಕೊಟ್ಟಿದೆ. ಈ ರೀತಿ ಎಲ್ಲಾ ಜಿಲ್ಲೆಗಳಲ್ಲಿಯೂ ಜನ ಇತ್ತೀಚೆಗೆ ಇದಕ್ಕಾಗಿ ಮುಂದೆ ಬರುತ್ತಿದ್ದಾರೆ. ಜನರಲ್ಲಾಗಿ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಸಾಲ ಕೊಟ್ಟಿರತಕ್ಕಂಥ ಹಣ ವಸೂಲು ಆಗುತ್ತಾ ಇದೆ. ಇನ್ನೂರು ಚಿಲ್ಲರೆ ಸೊಸೈಟಿಗಳು ಸ್ಥಾಪನೆಯಾಗಿವೆ ಅದರಲ್ಲಿ ಒಂದು ನೂರು ಸೊಸೈಟಿಗಳು ಹಾಲು ಉತ್ಪಾದನೆ ಮಾಡಿ ಕೊಡುತ್ತಿವೆ. ಅವುಗಳಿಗೆ ಕೊಟ್ಟಿರತಕ್ಕಂಥ ಹಣ ವಸೂಲ್ಮಾಡಿಕೊಂಡಿದ್ದೇವೆ. ಅಲ್ಪಸ್ವಲ್ಪ ಹಣ ಇನ್ನೂ ವಸೂಲು ಆಗತಕ್ಕಂಥಾದ್ದು ಇವೆ. ಅವರು ಹಾಲು ಒದಗಿಸುತ್ತಾ ಇದ್ದಾರೆ. ಆದುದರಿಂದ ಯಾವುದಾದರೂ ಸೊಸೈಟಿ ಬಗ್ಗೆ ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳಬಹುದು.

ಶ್ರೀ ಎಚ್. ಸಿದ್ಧವೀರಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಜನಕ್ಕೆ ಹಣ ಕೊಟ್ಟಿರಿ? ಈ ಸಂಸ್ಥೆಗಳು ಈಗ ಏನಾಗಿವೆ? ಕಳೆದ ಹತ್ತು ವರ್ಷಗಳಲ್ಲಿ ಕೊಟ್ಟಿರತಕ್ಕಂಥ ಹಣ ವಸೂಲು ಆಗಿದೆಯೇ?

ಶ್ರೀ ಡಿ. ದೇವರಾಜ ಅರಸ್.—ಈ ಬಗ್ಗೆ ಪ್ರತ್ಯೇಕ ಪ್ರಶ್ನೆ ತಮ್ಮ ಮುಖೇನ ಕಳಿಸಿದರೆ ಅದಕ್ಕೆ ಉತ್ತರ ಹೇಳುತ್ತೇನೆ.

Deterioration in Standard of Education

426. Sri D. B. KALMANKAR (Aland).—

Will the Minister for Agriculture and Education be pleased to state :—

(*a*) whether the Government is aware that the Standard of Education has terribly deteriorated due to rampant practice of private tuitions on mass scale by the teachers of Government High Schools and due to leakage of S. S. L. C. papers ;

(*b*) if so, what steps the Government proposes to take to eradicate these evils ;

(*c*) whether it has come to the notice of the Government that there is lack of discipline and ethical standards in student community ; if so, what changes the Government proposes to make in their curriculum ?

A.—Sri K. V. SHANKARA GOWDA (Minister for Agriculture and Education).—

(*a*) No.

(*b*) Does not arise.